

ಅವಳ ತಲೆಯಲ್ಲಿ ಮತ್ತೊಂದು ಯೋಚನೆ ಹಣಕಿ ಹಾಕಿತು. ಆ ವೇಶ್ಯಾವಠಾರದಿಂದ ನನ್ನನ್ನು ಮಾತ್ರ ಏಕೆ ಇಲ್ಲಿ ಕರೆತಂದಿದ್ದಾರೊ ಎಂಬ ದುಗುಡ ಕಾಡಿತು.

ಸ್ವಲ್ಪ ಸಮಯ ಕಳೆದ ಬಳಿಕ ಅವರು ಅವಳನ್ನು ಒಂದು ಹಳೆಯ ಮನೆಗೆ ಕರೆದು ಕೊಂಡು ಹೋದರು. ಒಂದು ಸಾದಾ ಗಾಂವಠಿ ಮನೆ. ಅದರಲ್ಲಿನ ಒಂದು ಜೀರ್ಣವಾದ ಕೋಣೆ, ಮೇಲೆ ಹುಲ್ಲಿನ ಮಾಡು. ಅಲ್ಲಿಂದ ಬೆಳಕು ಬರುತ್ತಿತ್ತು. ಅಲ್ಲೊಂದು ಹಗ್ಗದ ಕುರ್ಚಿ, ಅದರ ಮೇಲೆ ಅವಳನ್ನು ಕೂಡಿಸಿದರು. ಬಳಿಕ ಶಿಸ್ತಿನಿಂದ ಬಟ್ಟೆಬರೆ ಧರಿಸಿದ ಮೂರು ನಾಲ್ಕು ಜನ ಒಳಗೆ ಬಂದರು. ಅವರಲ್ಲಿ ಹಿಂದೊಮ್ಮೆ ಮನೆಗೆ ಹಣದೊಂದಿಗೆ ಬಂದ ಡೈರೆಕ್ಟರ್‌ರೂ ಇದ್ದರು. ಅವರು ನಾರಾಯಣಿಗೆ ಚಿತ್ರದ ಕಥೆ ಹೇಳಿದರು. 'ಈ ಊರಿನಲ್ಲಿ ಗಂಡ ಹೆಂಡತಿ ಮತ್ತು ಮಕ್ಕಳೊಂದಿಗೆ ಇರುವ ಸುಖಿಸಂಸಾರವಿತ್ತು. ಗಂಡನ ಹೆಸರು ಶಿವಶಂಕರ, ಹೆಂಡತಿ ರಾಮೇಶ್ವರಿ. ಈ ಮನೆಯ ಹಿಂದಿನ ಕಾಡಿನಲ್ಲಿ ಭೂಪಸಿಂಗನೆಂಬ ದರೋಡೆಕೋರ ತನ್ನ ದೊಡ್ಡ ತಂಡ ಕಟ್ಟಿಕೊಂಡು ಇರುತ್ತಿದ್ದ. ಅವನು ಸುತ್ತಮುತ್ತ ವಾಸಿಸುತ್ತಿದ್ದ ಜನರನ್ನು ಪೀಡಿಸುತ್ತಿದ್ದ. ಒಂದು ದಿನ ಆಕಸ್ಮಿಕವಾಗಿ ಪೊಲೀಸರು ಅವನ ತಂಡದ ಮೇಲೆ ದಾಳಿ ಮಾಡಿ ಸೆರೆ ಹಿಡಿದರು. ಈ ಹೊಡೆದಾಟದಲ್ಲಿ ಭೂಪಸಿಂಗನ ತಂಡದ ನಾಲ್ವರು ತಪ್ಪಿಸಿಕೊಂಡು ಓಡಿ ಹೋಗಲು ಅನುಕೂಲವಾಯಿತು. ಭೂಪಸಿಂಗ ಅಡಗಿರುವ ತಾಣದ ವಿವರ ಪೊಲೀಸರಿಗೆ ಶಿವಶಂಕರನೇ ಕೊಟ್ಟಿದ್ದಾನೆ ಎಂಬ ಸಂಶಯ ಭೂಪಸಿಂಗನಿಗೆ ಬಂತು. ಒಂದು ನಸುಕಿನಲ್ಲಿಯೆ ಭೂಪಸಿಂಗನು ಶಿವಶಂಕರನ ಮನೆಯ ಮೇಲೆ ದಾಳಿ ಮಾಡಿದ. ಶಿವಶಂಕರ ಮತ್ತು ಅವನ ಎರಡು ಮಕ್ಕಳನ್ನು ತಲವಾರಿನಿಂದ ಹೊಡೆದು ಕೊಂದು ಹಾಕಿದ. ರಾಮೇಶ್ವರಿಯ ಮೇಲೆ ಅವರೆಲ್ಲ ಸಾಮೂಹಿಕ ಬಲಾತ್ಕಾರ ಮಾಡಿ ಅವಳನ್ನು ನಗ್ನಗೊಳಿಸಿ ಅವಳನ್ನು ಊರಲ್ಲಿ ಮೆರವಣಿಗೆ ಮಾಡಿದರು. ರಾಮೇಶ್ವರಿ ತನಗಾದ ಅಪಮಾನದಿಂದ ಸಿಡಿದೆದ್ದಳು. ಕೆಲವು ದಿನಗಳ ನಂತರ ಅವಳು ಕೈಯಲ್ಲಿ ಬಂದೂಕು ಹಿಡಿದಳು. ತನ್ನದೇ ಒಂದು ತಂಡ ಕಟ್ಟಿಕೊಂಡು ಭೂಪಸಿಂಗನ ವಿರುದ್ಧ ಐದು ವರ್ಷ ಹೋರಾಟ ನಡೆಸಿದಳು. ರಾಮೇಶ್ವರಿಯು ಭೂಪಸಿಂಗನ ತಂಡದಲ್ಲಿದ್ದವರನ್ನು ಒಂದೊಂದಾಗಿ ಗುರುತಿಸಿ ಕೊಂದು ಹಾಕಿದಳು. ಕೊನೆಗೆ ಭೂಪಸಿಂಗನನ್ನು ಹಿಡಿದು ತಂದು ಊರಲ್ಲಿ ಮೆರವಣಿಗೆ